**ಸಾಕ್ಷಿಗೆ ದಿನಾಂಕಃ05-08-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀಮತಿ ಹೆಚ್ ಬಿ ವಕೀಲರಿಂದ ::**

ನಾನು ನಿವೃತ್ತ ಶಿಕ್ಷಕನಾಗಿರುತ್ತೇನೆ ಎಂದರೆ ಸರಿ. ನಾನು ಲಿಂಗದಹಳ್ಳಿಯಲ್ಲಿ ಖಾಯಂ ಆಗಿ 2020 ರಿಂದ ವಾಸ ಮಾಡಿಕೊಂಡಿರುತ್ತೇನೆ. ನನ್ನ ಸ್ವಂತ ಊರು ಲಿಂಗದಹಳ್ಳಿಯಾಗಿದ್ದು, ಕೆಲಸದ ನಿಮಿತ್ತ ನಾನು ಇತರೇ ಊರುಗಳಲ್ಲಿ ಹಿಂದೆ ವಾಸ ಮಾಡಿಕೊಂಡಿದ್ದು, ಆಗಾಗ ಊರಿಗೆ ಬಂದು ಹೋಗುವುದನ್ನು ಮಾಡಿಕೊಂಡಿದ್ದೆ. 2 ರಿಂದ 4 ನೇ ವಾದಿಗಳು ನನ್ನ ಸಹೋದರರಾಗಿರುತ್ತಾರೆ ಎಂದರೆ ಸರಿ. 2 ರಿಂದ 4 ನೇ ವಾದಿಗಳು ಲಿಂಗದಹಳ್ಳಿಯಲ್ಲಿ ಖಾಯಂ ಆಗಿ ವಾಸ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ಮುತ್ತಜ್ಜನ ಹೆಸರು ದಿವಂಗತ ಗುರುಪಾದಯ್ಯ ಆಗಿರುತ್ತದೆ. ಗುರುಪಾದಯ್ಯ ರವರಿಗೆ ಎರಡು ಜನ ಮಕ್ಕಳು ಇದ್ದರು, ಅವರ ಹೆಸರು ಪ್ರಭಯ್ಯ ಮತ್ತು ರುದ್ರಯ್ಯ. ಗುರುಪಾದಯ್ಯ ರವರಿಗೆ ಲಿಂಗದಹಳ್ಳಿಯಲ್ಲಿ ಸರ್ವೇ ನಂಬರ್ 174 ರಲ್ಲಿ 1 ಎಕರೆ 21 ಗುಂಟೆ, ಸರ್ವೇ ನಂಬರ್ 184 ರಲ್ಲಿ 6 ಎಕರೆ 24 ಗುಂಟೆ, ಕಲ್ಲಾಳು ಗ್ರಾಮದ ಸರ್ವೇ ನಂಬರ್ 7 ರಲ್ಲಿ 3 ಎಕರೆ, ಕಲ್ಲಾಳು ಗ್ರಾಮದ ಸರ್ವೇ ನಂಬರ್ 29 ರಲ್ಲಿ ಮುಕ್ಕಾಲು ಎಕರೆ ಮತ್ತು ಸರ್ವೇ ನಂಬರ್ 30 ರಲ್ಲಿ 1 ಎಕರೆ ಒಂದು ಗುಂಟೆ ಜಾಗ ಇತ್ತು. ಗುರುಪಾದಯ್ಯ ರವರಿಗೆ ಬಸಯ್ಯ ಯಾನೆ ಚನ್ನಬಸಯ್ಯ ಎನ್ನುವ ಮಗ ಸಹ ಇದ್ದರು ಎಂದರೆ ಸಾಕ್ಷಿಯು ಅವರು ಗುರುಪಾದಯ್ಯ ರವರ ತಮ್ಮ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಗುರುಪಾದಯ್ಯ ರವರು ಅವರ ಜೀವಿತಾ ಅವಧಿಯಲ್ಲಿ ಅವರ ಆಸ್ತಿಗಳನ್ನು ಅವರ ಮಕ್ಕಳು ಹಾಗೂ ತಮ್ಮನ ಜೊತೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

ದಾವ ಸ್ವತ್ತಿನ ಖಾತೆಯು ಗುರುಪಾದಯ್ಯ ರವರ ಹೆಸರಿನಲ್ಲಿಯೇ ಇತ್ತು ಎಂದರೆ ಸಾಕ್ಷಿಯು ಗುರುಪಾದಯ್ಯ, ಚಂದ್ರಶೇಖರಯ್ಯ ಮತ್ತು ಪ್ರಭಯ್ಯ ರವರ ಜಂಟಿ ಖಾತೆಯಲ್ಲಿ ಇತ್ತು ಎಂದು ನುಡಿಯುತ್ತಾರೆ. ಪ್ರಭಯ್ಯ, ಚಂದ್ರಶೇಖರಯ್ಯ ಮತ್ತು ನಂಜಯ್ಯ ರವರ ನಡುವೆ ವಿಭಾಗ ಕೋರಿ ಒಂದು ದಾವೆ ನ್ಯಾಯಾಲಯದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯ ಅಸಲು ದಾವಾ 305/2022 ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಸಹ ಪಕ್ಷಗಾರನಾಗಿದ್ದು, ಅದರಲ್ಲಿ ತಕರಾರು ಹಾಕಿರುತ್ತೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ.

ದಾವಾ ಸ್ವತ್ತಿನಲ್ಲಿ ಪ್ರಭಯ್ಯ, ಚಂದ್ರಶೇಖರಯ್ಯ ಹಾಗೂ ನಂಜಯ್ಯ ರವರ ಕುಟುಂಬಸ್ಥರಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯು ತನ್ನ ಆಸ್ತಿಯನ್ನು 2006 ನೇ ಸಾಲಿನಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಸಮಯದಿಂದ ಪ್ರತಿವಾದಿಯು ತನ್ನ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನ ದೊಡ್ಡಪ್ಪನ ಮಗ ರಾಜಶೇಖರಯ್ಯ ರವರಿಂದ ಅವರ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ಕ್ರಯದ ಪೂರ್ವದಲ್ಲಿ ಪ್ರತಿವಾದಿಯ ಸ್ವತ್ತು ರಾಜಶೇಖರಯ್ಯ ರವರ ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ರಾಜಶೇಖರಯ್ಯ ಹಾಗೂ ನನ್ನ ತಂದೆ ನಡುವೆ ಕುಟುಂಬದ ಆಸ್ತಿಗಳ ವಿಭಾಗವು ಅಂದಾಜು 1947-48 ಸಾಲಿನಲ್ಲಿ ಆಗಿರಬಹುದು.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: